

ಕುಲ್‌ಬಾಕ್‌ನಲ್ಲಿ ಸೈಕಲಿಗರು
(ನಡುವಿನಲ್ಲಿರುವುದು ಲೇಖಕರು)

ಇದೀಗ ತನ್ನ ಮೂಲ ಸ್ವರೂಪ, ಸಂಸ್ಕೃತಿ, ಸಿದ್ಧಾಂತ, ಸಮಗ್ರತೆಯತ್ತ ನಿಧಾನವಾಗಿ ಹೊರಳಿಕೊಳ್ಳುತ್ತಿದೆ. ಈ ಬದಲಾವಣೆಗಳ ಸಂಕೇತವೋ ಎಂಬಂತೆ, ನಗರದ ಮುಖ್ಯ ಚೌಕದಲ್ಲಿದ್ದ ರಷ್ಯನ್ ಸರ್ವಾಧಿಕಾರಿ ಲೆನಿನ್‌ನ ಪ್ರತಿಮೆಯನ್ನು ಬದಿಗೊತ್ತಿ, ತಜಕಿ ದೇಶಾಭಿಮಾನದ ಪ್ರತೀಕವಾದ 10ನೇ ಶತಮಾನದ ಸಾರ್ವಕಾಲಿಕ, ರಾಷ್ಟ್ರೀಯ ಹೀರೊ ಎನಿಸಿಕೊಂಡ ಇಸ್ಮಾಯಿಲ್ ಸೋಮಾನಿಯ ಅವರ ಭವ್ಯ ಮೂರ್ತಿಯನ್ನು ಸ್ಥಾಪಿಸಲಾಗಿದೆ. ಆ ಚೌಕದ ಸಮೀಪದಲ್ಲೇ ಇರುವ ನ್ಯಾಷನಲ್ ಮ್ಯೂಸಿಯಂ ನಗರದ ಇನ್ನೊಂದು ಮುಖ್ಯ ಆಕರ್ಷಣೆ. ಆ ವಸ್ತು ಸಂಗ್ರಹಾಲಯದಲ್ಲಿರುವ 1500 ವರ್ಷಗಳ, 40 ಅಡಿ ಉದ್ದದ, ಮಲಗಿರುವ ಬುದ್ಧನ ಮತ್ತು ದಂತದಲ್ಲಿ ಕೆತ್ತಿರುವ ಅಲೆಗ್ಸಾಂಡರನ ಕಲಾಕೃತಿಗಳು ನೋಡಲು ಯೋಗ್ಯವಾಗಿವೆ.

ನಗರದ ಸುತ್ತ ಹರಡಿರುವ ವಿಶಾಲ ಮಸೀದಿಗಳು, ಮಿನಾರುಗಳು ನೋಡುಗರ ಗಮನ ಸೆಳೆಯುತ್ತವೆ. ಜನಸಾಮಾನ್ಯರ ಜೇಬಿಗೆ ಒಗ್ಗುವ ಹೋಟೆಲುಗಳಿಂದ ಹಿಡಿದು ಪಂಚತಾರಾ ಹೋಟೆಲುಗಳು, ತಜಕಿ, ರಷ್ಯನ್, ಪರ್ಷಿಯನ್, ಟರ್ಕಿ, ಇಟಾಲಿಯನ್, ಇಂಡಿಯನ್ ಭೋಜನ ಗೃಹಗಳು, ಆಕರ್ಷಕ ಮಾರುಕಟ್ಟೆ ಪ್ರದೇಶಗಳು, ಶಾ ಮನ್ಸೂರು ಮತ್ತು ಬಾರಾಕಾಟ್ ಮಾರ್ಕೆಟ್ಟುಗಳು ಇವೆಲ್ಲ ಪ್ರವಾಸಿಗರ ಆಕರ್ಷಣೆಯ ಕೇಂದ್ರಗಳಾಗಿವೆ. ದುಶಾಂಬೆಯಿಂದ 30 ಕಿ.ಮೀ. ದೂರವಿರುವ ಹಿಸ್ಸಾರ್ ಕೋಟೆ ತನ್ನ ಪ್ರಾಚೀನ ವೈಭವದಿಂದ ಗಮನಸೆಳೆಯುತ್ತದೆ, ಒಂದು ದಿನದ ಚಂದದ ಪಿಕ್‌ನಿಕ್‌ಗೆ ಅದು ಹೇಳಿ ಮಾಡಿಸಿದಂತಿದೆ.

## ಸೈಕಲ್ಲೇರಿ ಪಂಜ್ ನದಿಯುಗುಂಟ

ಎರಡು ದಿನಗಳ ದುಶಾಂಬೆ ಸುತ್ತಾಟದ ಬಳಿಕ, ಸೈಕಲ್ಲೇರಿ ದಕ್ಷಿಣಾಭಿಮುಖವಾಗಿ ಪಾಮಿರ್ ಹೆದ್ದಾರಿ ಪಯಣ ಶುರು ಮಾಡಿದೆ. ತಜಕಿಸ್ತಾನದ ಮುಖ್ಯ ಜೀವನದಿಯಾದ ಪಂಜ್ ಗುಂಟ ಸಾಗುವ ಈ ಹೆದ್ದಾರಿಯಲ್ಲಿ ದಿನಕ್ಕೆ ಸರಾಸರಿ 40ರಿಂದ 45 ಕಿ.ಮೀ. ಸೈಕಲ್ ಪಯಣ. ತಿರುವುದಾರಿಗಳಲ್ಲಿ ಹತ್ತುತ್ತ, ಇಳಿಯುತ್ತ, ನಡೆಯುತ್ತ, ದೂಡುತ್ತ, ನಿಸರ್ಗ ದೃಶ್ಯಗಳ ಸವಿಯುತ್ತ, ಅಲ್ಲಲ್ಲಿ ನಿಂತು ಜನರೊಡನೆ ಬೆರೆಯುತ್ತ, ದಾರಿ ಬದಿಯ ಸಣ್ಣ ಸಣ್ಣ ಚಾಯ್‌ಖಾನೆಗಳಲ್ಲಿ ಊಟ ಉಪಹಾರ ಮಾಡುತ್ತ, ಹೋಮ್ ಸ್ಟೇಗಳಲ್ಲಿ ರಾತ್ರಿ ವಿರಮಿಸುತ್ತ, ಶುರ್‌ಬಾದ್ ಕಣಿವೆಯ ಮೂಲಕ ಕುಲ್‌ಬಾಕ್ ಎಂಬ ಎತ್ತರದ ಆಯಕಟ್ಟಿನ ಸ್ಥಳ ತಲುಪಿದೆ.

ಕುಲ್‌ಬಾಕ್ ಅಫ್ಘಾನಿಸ್ತಾನದ ಗಡಿಯಲ್ಲಿದೆ. ಅಲ್ಲಿಂದ ದೂರ ದೂರದವರೆಗೆ ಕಾಣುವ ಹಿಂದ್ ಖುಷ್ ಪರ್ವತ ಶ್ರೇಣಿಗಳ ಸಮೇತ ಅಫ್ಘಾನಿಸ್ತಾನ ದೇಶದ ವಿಹಂಗಮ ನೋಟ ಸಾಧ್ಯವಾಗುತ್ತದೆ. ಅಲ್ಲೇ ಐರ್ಲೆಂಡ್‌ನಿಂದ ಬಂದಿದ್ದ ಇನ್ನಿಬ್ಬರು ಸೈಕಲಿಗರ ಪರಿಚಯ ನನಗಾಯಿತು. ಮುಂದೆ ಅವರಿಬ್ಬರ ಆತ್ಮೀಯ ಒಡನಾಟದಲ್ಲಿ ಏನೂ ತೊಂದರೆಯಿಲ್ಲದೆ ಆರಾಮವಾಗಿ ಖೊರೋಗ್ ಪಟ್ಟಣ ಮುಟ್ಟಿದೆ.

## ಖೊರೋಗ್ ಮತ್ತು ಮುರ್‌ಗಾಬ್

ಖೊರೋಗ್ ಪಾಮಿರ್ ಪ್ರಾಂತ್ಯದ ಮುಖ್ಯ ನಗರ. ಊರು ಚಿಕ್ಕದಾದರೂ ಚೊಕ್ಕವಾಗಿದೆ. ಊರಿನ ನಡುವೆ ಹರಿಯುವ ಗುಂಟ್ ನದಿಯ ಪಕ್ಕದಲ್ಲೇ ಸುಂದರವಾದ ವಿಶಾಲ ಸೆಂಟ್ರಲ್ ಪಾರ್ಕ್ ಉದ್ಯಾನವನವಿದೆ. ಜಗತ್ತಿನಲ್ಲೇ ಅತ್ಯಂತ ಎತ್ತರದಲ್ಲಿರುವ ಬೊಟಾನಿಕಲ್ ಗಾರ್ಡನ್ ಇಲ್ಲಿನ ಮತ್ತೊಂದು ಆಕರ್ಷಣೆ.



ಊರ ಪಶ್ಚಿಮಕ್ಕೆ 5 ಕಿ.ಮೀ ದೂರದಲ್ಲಿರುವ ಸೇತುವೆ ದಾಟಿದರೆ ಸಿಗುವ ಅಫ್ಘನ್ ಗಡಿಯಲ್ಲಿ ಪ್ರತಿ ಶನಿವಾರ ನಡೆಯುವ ಅಫ್ಘನ್ ಸಂತೆಯದ್ದು ಒಂದು ಅಪರೂಪದ ಅನುಭವ. ಸ್ಥಳೀಯ ತಜಕಿ ಮತ್ತು ಗಡಿ ದಾಟಿ ಬರುವ ಅಫ್ಘಾನಿ ವರ್ತಕರು ಸೇರಿ ನಡೆಸುವ ಈ ಸಂತೆಯಲ್ಲಿ ತಾಜಾ ಹಣ್ಣು ತರಕಾರಿ, ದವಸ ಧಾನ್ಯಗಳು, ದಿನಬಳಕೆಯ ವಸ್ತುಗಳು, ಒಣ ಹಣ್ಣುಗಳು, ಮನೆಯಲ್ಲಿ ತಯಾರಿಸಿದ ಮದ್ಯಗಳು, ಶಾಲು, ಟೋಪಿ, ಕಾಲುಚೀಲದಂತಹ ಕರಕುಶಲ ವಸ್ತುಗಳು ಭರಾಟೆಯಿಂದ ಮಾರಾಟವಾಗುತ್ತವೆ.

ಅಫ್ಘನ್ನರಿಗಂತೂ ಭಾರತೀಯರನ್ನು ಕಂಡರೆ ಹೆಚ್ಚಿನ ಆದರ, ಪ್ರೀತಿ. ನನ್ನನ್ನು ನೋಡಿ ತುಂಬಾ ಖುಷಿಯಲ್ಲಿ 'ಸಲಾಮ್, ಸಲಾಮ್' ಎಂದು ಸ್ವಾಗತಿಸುತ್ತಾ, ಕೈ ಕುಲುಕುತ್ತಾ, ತಬ್ಬಿಕೊಳ್ಳುತ್ತ, ತುಂಬಾ ಮೆಚ್ಚಿಕೊಳ್ಳುವ ಬಾಲಿವುಡ್‌ನ ಅಮಿತಾಬ್